ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಆಯುಕ್ತರು/ಆಕುಕ/ಆಶಾ/36/2020 ದಿನಾಂಕ: 04.08.2020

**ಸುತ್ತೋಲೆ**

**ವಿಷಯ:** ಬಿಬಿಎಂಪಿ ಆನ್‌ಲೈನ್ ಬೆಡ್ ಮ್ಯಾನೇಜ್‌ಮೆಂಟ್ ಪೋರ್ಟಲ್ ಮೂಲಕ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಿಗೆ ಕರ್ನಾಟಕದ ಇತರ ಜಿಲ್ಲಾಡಳಿತ ಸೂಚಿಸಿರುವ ಕೋವಿಡ್ ದೃಢಪಟ್ಟ ರೋಗಿಗಳಿಗಳನ್ನು ಸೇರಿಸಿಕೊಳ್ಳುವ ಬಗ್ಗೆ ಸ್ಪಷ್ಟನೆ.

*****

ಬಿಬಿಎಂಪಿಯ ವ್ಯಾಪ್ತಿಯಲ್ಲಿರುವ (ಬೆಂಗಳೂರು ನಗರ ಜಿಲ್ಲೆಯ ತಾಲ್ಲೂಕುಗಳನ್ನು ಸೇರಿದಂತೆ) ಕೋವಿಡ್ ಸಂಶಯಾಸ್ಪದ (SARI) ರೋಗಿಗಳು ಒಳಗೊಂಡಂತೆ ಕೋವಿಡ್ ದೃಢಪಟ್ಟ ಪ್ರಕರಣಗಳು, ಬಿಬಿಎಂಪಿಯಿಂದ ಸೂಚಿಸಲಾಗಿರುವ ಎಲ್ಲ ಪ್ರಕರಣಗಳನ್ನು ಆಸ್ಪತ್ರೆಗೆ ಸೇರಿಸುವ ಮತ್ತು ಬಿಡುಗಡೆ ಮಾಡುವುದನ್ನು ಇನ್ನು ಮುಂದೆ ಆನ್ ಲೈನ್ ಪೋರ್ಟಲ್ ಕೋವಿಡ್ ಹಾಸ್ಪಿಟಲ್ ಬೆಡ್ ಮ್ಯಾನೇಜ್ಮೆಂಟ್ ಸಿಸ್ಟಮ್ (CHBMS) ಮೂಲಕ ಮಾಡಬೇಕಾಗಿರುತ್ತದೆ.

ಆದರೆ, ಬೆಂಗಳೂರಿನ ಅಕ್ಕ-ಪಕ್ಕದ ಜಿಲ್ಲೆಗಳ ಆಡಳಿತ ವರ್ಗದವರು ಕೆಲವು ರೋಗಿಗಳನ್ನು ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಿಗೆ ದಾಖಲಾಗಲು, ಚೀಟಿಗಳೊಂದಿಗೆ ಶಿಫಾರಸ್ಸು ಮಾಡುತ್ತಿದ್ದಾರೆ ಮತ್ತು ಆನ್‌ಲೈನ್ ಪೋರ್ಟಲ್ ಹೊರತಾಗಿ ಇಂತಹ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲು ಆಸ್ಪತ್ರೆಗಳಿಗೆ ಸಾಧ್ಯವಾಗುತ್ತಿಲ್ಲ.

Pls. publish on SAST website & send to all DCs & DHOs RC [illegible] 11-8-2020

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾ ಅಡಿಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ಜಿಲ್ಲಾಡಳಿತ ಸೂಚಿಸಿರುವ ರೋಗಿಗಳನ್ನು ದಾಖಲಿಸಲು ಈ ಕೆಳಗಿನ ಶಿಷ್ಟಾಚಾರವನ್ನು ರೂಪಿಸಲಾಗಿದೆ.

PM(RT)

1. ಸಂಬಂಧಪಟ್ಟ ಜಿಲ್ಲಾಡಳಿತವು ರೋಗಿಗಳ ಮುಂದೆ ತಿಳಿಸಿರುವ ವಿವರಗಳೊಂದಿಗೆ ವಿಶೇಷ ಆಯುಕ್ತ (ಆರೋಗ್ಯ), ಬಿಬಿಎಂಪಿಗೆ ಲಿಖಿತ ವಿನಂತಿಯನ್ನು ಕಳುಹಿಸತಕ್ಕದ್ದು; (1) ಎಸ್‌ಆರ್ ಎಫ್‌ಐಡಿ ಸಂಖ್ಯೆ, (2) ಜಿಲ್ಲಾ ಕೋಡ್ (ಲಭ್ಯವಿದ್ದಲ್ಲಿ) (3) ಮೊಬೈಲ್ ಸಂಖ್ಯೆ (4) ರೋಗಿಯ ಹೆಸರು (5) ಲಿಂಗ (6) ವಯಸ್ಸು ಮತ್ತು (7) ಇ-ಮೇಲ್ ಮೂಲಕ ಸೂಚಿಸುತ್ತಿರುವುದಕ್ಕೆ ಕಾರಣಗಳು (spcomswm@bbmp.gov.in).
2. ಜಿಲ್ಲೆಯ ಜಿಲ್ಲಾಧಿಕಾರಿ ಅಥವಾ ಹೆಚ್ಚುವರಿ ಜಿಲ್ಲಾಧಿಕಾರಿಗಳು ಮಾತ್ರ, ಸರಿಯಾದ ಸಮರ್ಥನೆಯೊಂದಿಗೆ ರೋಗಿಯನ್ನು ಇತರೆ ಆಸ್ಪತ್ರೆಗಳಿಗೆ ದಾಖಲು ಮಾಡಲು ಶಿಫಾರಸ್ಸು ಮಾಡುವ ಅಧಿಕಾರ ಹೊಂದಿರುತ್ತಾರೆ.

3. ಈ ರೀತಿ ಶಿಫಾರಸ್ಸುಗೊಂಡ ಪ್ರಕರಣಗಳು ದಾಖಲುಗೊಂಡ ನಂತರ, ವಿಶೇಷ ಆಯುಕ್ತರು (ಆರೋಗ್ಯ), ಬಿಬಿಎಂಪಿಯವರು ಸಿಎಚ್‌ಬಿಎಂಎಸ್ ಪೋರ್ಟಲ್‌ನಲ್ಲಿ CPT ಕೋಶದ ಮೂಲಕ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಹಾಸಿಗೆಯನ್ನು ಕಾಯ್ದಿರಿಸುತ್ತಾರೆ
4. ರೋಗಿಗಳನ್ನು ದಾಖಲು ಮಾಡುವುದು ಹಾಗೂ ಆಸ್ಪತ್ರೆಯಿಂದ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಕ್ರಮಗಳಿಗಾಗಿ ಹಾಸಿಗೆಗಳ ಹಂಚಿಕೆಯ ಮಾಹಿತಿಯನ್ನು ರೋಗಿಗೆ ಮತ್ತು ಆಸ್ಪತ್ರೆಗೆ ತಿಳಿಸಲಾಗುವುದು.
5. ರೋಗಿಯು ಅಗತ್ಯ ದಾಖಲೆಗಳನ್ನು ಆಸ್ಪತ್ರೆಗೆ ಒದಗಿಸಿದ ನಂತರದಲ್ಲಿ ಮರು-ಪಾವತಿ ಪ್ರಕ್ರಿಯೆಯನ್ನು ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟ್‌ನಿಂದ (SAST) ಕೈಗೊಳ್ಳಲಾಗುವುದು.
6. ಮೇಲಿನ ವಿಧಾನವನ್ನು ಅನುಸರಿಸದೆ ಯಾವುದೇ ಆಸ್ಪತ್ರೆಗೆ, ನೇರವಾಗಿ ಹೋಗುವ ಪ್ರಕರಣಗಳನ್ನು ಸರ್ಕಾರ ಅಧಿಸೂಚಿಸಿರುವ ಆಸ್ಪತ್ರೆಗಳಲ್ಲಿ ಕಾಯ್ದಿರಿಸಿದ ಹಾಸಿಗೆಗಳನ್ನು ಪಡೆಯುವ ಹಕ್ಕನ್ನು ಹೊಂದಲು ಅನುಮತಿ ಇರುವುದಿಲ್ಲ. ಆದಾಗ್ಯೂ, ಆಸ್ಪತ್ರೆಗಳು ಅಂತಹ ರೋಗಿಗಳನ್ನು ಖಾಸಗಿ ಕೋಟಾದಲ್ಲಿ ಮೀಸಲಿಟ್ಟಿರುವ ಹಾಸಿಗೆಗಳು ಲಭ್ಯವಿದ್ದಲ್ಲಿ ದಾಖಲು ಮಾಡಿಕೊಳ್ಳಬಹುದು ಮತ್ತು ಅಂತಹ ರೋಗಿಗಳ ಚಿಕಿತ್ಸೆಗೆ ಸರ್ಕಾರವು ನಿಗದಿಪಡಿಸಿದ ಚಿಕಿತ್ಸಾ ಶುಲ್ಕದ ದರವನ್ನು ಮೀರಬಾರದು.

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಪ್ರತಿಯನ್ನು:

1. ಆಯುಕ್ತರು, ಬಿಬಿಎಂಪಿ.
2. ಕಾರ್ಯಕಾರಿ ನಿರ್ದೇಶಕರು, ಎಸ್ ಎ ಎಸ್ ಟಿ.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಸಂಬಂಧ ಪಟ್ಟ ಎಲ್ಲಾ ವೈದ್ಯಕೀಯ ಸಂಸ್ಥೆಗಳು.

ಪ್ರತಿಯನ್ನು ಇವರಿಗೆ ಮಾಹಿತಿಗಾಗಿ:

1. ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ.
2. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ.
3. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.